ಅಧ್ಯಕ್ಷರು: ಎಲ್ಲರೂ ಬಾವಿಯಿಂದ ಹೊರಗೆ ಹೋಗಲಿ, ಮಾತನಾಡಲಿಕ್ಕೆ ಅವಕಾಶ ಕೊಡುತ್ತೇನೆ.

3. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು:

ಕಾರ್ಯದರ್ಶಿ(2), ವಿಸ:(ಅ) ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ, 2010 ಅನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ಮಂಡಿಸಲಾಯಿತು. (ಅನುಬಂಧ–I)

(ಗೊಂದಲ)

MR. SPEAKER: You cannot demand, I say, You cannot demand like that. ನೀವು ಹೇಳಿದಂತೆ ಸಭೆಯನ್ನು ನಡೆಸಲಿಕ್ಕೆ ನಾನು ಇಲ್ಲಿ ಕುಳಿತಿಲ್ಲ. you mind it ಯಾವುದನ್ನೂ ದಾಖಲೆಗೆ ತೆಗೆದುಕೊಳ್ಳಬೇಡಿ, ಏನು ಬೇಕಾದರೂ ಮಾತನಾಡಲಿ.

ಶ್ರೀ ಟಿ.ಬಿ.ಜಯಚಂದ್ರ: ಸದನ order ನಲ್ಲಿಲ್ಲ. ಅಧ್ಯಕ್ಷರೆ, ದಯಮಾಡಿ ಹಾಗೆ ಮಾಡಬೇಡಿ.

ಅಧ್ಯಕ್ಷರು: ಯಾವುದೂ ದಾಖಲೆಗೆ ತೆಗೆದುಕೊಳ್ಳಬೇಡಿ.

(ಈ ಹಂತದಲ್ಲಿ ಮಾನ್ಯ ಅಧ್ಯಕ್ಷರ ಆದೇಶದ ವಿರೋಧ ಪಕ್ಷದವರ ಯಾವುದೇ ಚರ್ಚೆಯನ್ನು ದಾಖಲಿಸಿಲ್ಲ)

ಅಧ್ಯಕ್ಷರು: (ಆ) ಸದಸ್ಯರಿಗೆ ಈಗಾಗಲೆ ಪ್ರತ್ಯೇಕವಾಗಿ ಕಳುಹಿಸಲಾಗಿರುವ ಮೂರು ಮತ್ತು ನಾಲ್ಕನೇ ಪಟ್ಟಿಯ ರೀತ್ಯಾ ಕಾಗದ ಪತ್ರಗಳನ್ನು ಮಂಡಿಸುವುದು.

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ನಾನು ಈ ಕೆಳಕಂಡ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

1978ರ ಕರ್ನಾಟಕ ರಾಜ್ಯ ನಾಗರೀಕ ಸೇವಾ ಅಧಿನಿಯಮದ ಪ್ರಕರಣ 8(ಎ)ರ ಮೇರೆಗೆ:

1. ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 224 ಬಿಗೆ ತಿದ್ದುಪಡಿ ಮಾಡಿ ದಿನಾಂಕ 7ನೇ ಜೂನ್ 2010ರಂದು ಹೊರಡಿಸಲಾದ ಎಫ್‌ಡಿ 1 ಎಸ್‌ಆರ್‌ಎ 2010ನೇ ಸಂಖ್ಯೆ ಅಧಿಸೂಚನೆ.